ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಪರೀಕ್ಷಾ ವಿಭಾಗ

"ಜ್ಞಾನ ಗಂಗಾ" ಕಲಬುರಗಿ-೫೮೫೧೦೫, ಕರ್ನಾಟಕ, ಭಾರತ. ದೂರವಾಣಿ ಸಂಖ್ಯೆ: 08472-263203

ಫ್ಯಾಕ್ಸ್ : 08472-263207 ಇ-ಮೇಲ್: regegug@rediffmail.com, rege@gug.ac.in

ಸಂಖ್ಯೆ:ಗುವಿಕ/ಪರೀಕ್ಷಾ/ಸಿ1(14)/2026-27/ ೨೧೫೮ ದಿನಾಂಕ: 13/11/26

ಪರಿಷ್ಕೃತ ಅಧಿಸೂಚನೆ

ವಿಷಯ: ಡಿಸೆಂಬರ್-2026 ರಲ್ಲಿ ಜರುಗಲಿರುವ ಬಿ.ಎಡ್ ದ್ವಿತೀಯ ಮತ್ತು ನಾಲ್ಕನೇ ಸೆಮೆಸ್ಟರ್ (Regular & Repeater) ಲಿಖಿತ ಪರೀಕ್ಷೆಗಳ ಬಗ್ಗೆ.

ಉಲ್ಲೇಖ: 1. ಅಧಿಸೂಚನೆ No. GUK/EDU/2025-26/563 ದಿನಾಂಕ 29.01.2026
2. ಸಂಖ್ಯೆ:ಗುವಿಕ/ಪರೀಕ್ಷಾ/ಸಿ1(14)/2026-27/2002 ದಿನಾಂಕ 02.11.2026

*****

ಡಿಸೆಂಬರ್-2026 ರಲ್ಲಿ ಜರುಗಲಿರುವ 2025-26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ನಾಲ್ಕನೇ ಸೆಮೆಸ್ಟರ್‌ನ ಲಿಖಿತ ಪರೀಕ್ಷೆಗಳ ಪರೀಕ್ಷಾ ಶುಲ್ಕ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ತಾತ್ಕಾಲಿಕ ವಿವರಗಳನ್ನು ಈ ಕೆಳಗಿನಂತೆ ಅಧಿಸೂಚಿಸಲಾಗಿದೆ.

ಭಾಗ-1

ಕ್ರಸಂ	ವಿವರಗಳು	B.Ed. II Semester	B.Ed. IV Semester
1	ಪರೀಕ್ಷಾ ಶುಲ್ಕ	With Practical	With Practical
		ರೂ. 2000/-	ರೂ. 2000/-
2	ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ (ಪಿ.ಪಿ.ಸಿ ಶುಲ್ಕ)	--	ರೂ.150
3	ಅಂಕಪಟ್ಟಿ ಶುಲ್ಕ	ರೂ.180/-	
4	ಅರ್ಜಿ ತಪಾಸಣೆ ಶುಲ್ಕ	ರೂ.20/-	
5	ಅರ್ಜಿಗಳ ಸಂಸ್ಕರಣ ಶುಲ್ಕ	ರೂ. 120/-	

ಭಾಗ-2

ಕ್ರಸಂ	ವಿವರಗಳು	ದಿನಾಂಕ
1.	ವಿದ್ಯಾರ್ಥಿಗಳು ಆನ್‌ಲೈನ್ **UUCMS** ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡರಹಿತ)	03.11.2026 ರಿಂದ 17.11.2026
2.	ವಿದ್ಯಾರ್ಥಿಗಳು ಆನ್‌ಲೈನ್ **UUCMS** ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡ ಸಹಿತ ರೂ. 100/-)	18.11.2026 ರಿಂದ 19.11.2026
3.	ವಿದ್ಯಾರ್ಥಿಗಳು ಆನ್‌ಲೈನ್ **UUCMS** ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡ ಸಹಿತ ರೂ. 100+650=750/-)	20.11.2026 ರಿಂದ 22.11.2026
4.	ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು**(Students List)** ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವ ಕೊನೆಯ ದಿನಾಂಕ	23.11.2026
5.	ವಿದ್ಯಾರ್ಥಿಗಳ ಹಾಜರಾತಿ ಮತ್ತು ಅಂತರಿಕ ಅಂಕಗಳನ್ನು **UUCMS** ಪೋರ್ಟಲ್ ಮೂಲಕ ಸಲ್ಲಿಸುವ ದಿನಾಂಕ	24.11.2026 ರಿಂದ 27.11.2026
6.	ಪರೀಕ್ಷಾ ಪ್ರವೇಶ ಪತ್ರಗಳನ್ನು **(Hall Ticket) UUCMS** ಪೋರ್ಟಲ್‌ನಿಂದ ಪಡೆಯಲು ಪ್ರಾರಂಭಿಸುವ ದಿನಾಂಕ	28.11.2026 ರಿಂದ 30.11.2026
7.	ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ	01.12.2026 ರಿಂದ 10.12.2026

SCAN AnyScanner

ಸೂಚನೆಗಳು

1. **ಡಿಸೆಂಬರ್-2026**ರ ಪರೀಕ್ಷಾ ಅರ್ಜಿಗಳನ್ನು **UUCMS** ಮೂಲಕ ಮಾತ್ರ ಪಡೆಯಬಹುದಾಗಿದ್ದು, ಯಾವುದೇ ಕಾರಣಕ್ಕೂ ಮ್ಯಾನವಲ್ ಅರ್ಜಿಗಳನ್ನು ನೀಡುವುದಿಲ್ಲ.
2. ಯಾವುದೇ ಕಾರಣಕ್ಕೂ ಪರೀಕ್ಷಾಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.
3. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2 (ಎ),ಪ್ರವರ್ಗ-2 (ಬಿ), ಪ್ರವರ್ಗ-3 (ಎ), ಪ್ರವರ್ಗ-3 (ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು, ಪೂರ್ಣ ಪರೀಕ್ಷಾ ಶುಲ್ಕ ಭರಿಸುವುದು. ವೃತ್ತಿಪರ ಕೋರ್ಸುಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವದಿಲ್ಲ.
4. **ಪ್ರತಿಯೊಂದು ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರು ಆಂತರಿಕ ಅಂಕಗಳನ್ನು UUCMS ಪೋರ್ಟಲ್ ಮೂಲಕ ಸಲ್ಲಿಸುವಾಗ Mean ಕ್ರಮ (ಪ್ರತಿಶತ 85% ಮೀರದಂತೆ) ಅನುಸರಿಸಬೇಕು ತಪ್ಪಿದಲ್ಲಿ ಪ್ರಾಂಶುಪಾಲರ ಮೇಲೆ ವಿಶ್ವವಿದ್ಯಾಲಯದ ನಿಯಮದ ಪ್ರಕಾರ ಸೂಕ್ತ ಕ್ರಮ ಕೈಗೊಳಲಾಗುವುದು.**
5. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ ಮತ್ತು ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
6. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಿದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.
7. ವಿಶ್ವವಿದ್ಯಾಲಯ ನಿಗದಿಪಡಿಸಿದ ಪರೀಕ್ಷಾ ಅರ್ಜಿ ತಾಪಾಸಣೆ ಶುಲ್ಕ ರೂ.20/- ರಲ್ಲಿ ವಿದ್ಯಾರ್ಥಿಗಳ ರೂ.10/-ನ್ನು ಪರೀಕ್ಷಾಂಗ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರಿಗೆ ಪಾವತಿಸಬೇಕು. ಉಳಿದ ರೂ.10/-ನ್ನು ತಮ್ಮ ಕಾಲೇಜಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಪಾವತಿಸಬೇಕು.
8. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ಅಭ್ಯರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂಥಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.
9. ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ತಮ್ಮ ಕಚೇರಿಯ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದ್ದಾಗಿದೆ ಎಂಬುದು ಮನವರಿಕೆ ಮಾಡಿಕೊಡಲು ಸೂಚಿಸಲಾಗಿದೆ.

ವಿಶೇಷ ಸೂಚನೆ:

ಪರೀಕ್ಷೆಗಳು ಮರು ಅವಕಾಶದಲ್ಲಿ (ರಿಪಿಟರ್ಸ) ಬರೆಯುತ್ತಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಒಂದ ರಿಂದ ಮೂರರ ವರೆಗಿನ ಪತ್ರಿ ಪತ್ರಿಕೆಗೆ ರೂ. 1000/- ಪರೀಕ್ಷಾ ಶುಲ್ಕ ಭರಿಸಬೇಕು. ಮೂರ ಕ್ಕಿಂತ ಹೆಚ್ಚು ವಿಷಯಗಳಲ್ಲಿ ಪರೀಕ್ಷೆ ಬರೆಯುತ್ತಿದ್ದರೆ ಅಂತಹ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕ ಭರಿಸಬೇಕು.

13/11/26

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಗೆ,
ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿಗಳು:

01. ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
02. ಸರಕಾರಿ ಲೆಕ್ಕ ಪರಿಶೋಧಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
03. ವಿಶೇಷಾಧಿಕಾರಿಗಳು ವಿದ್ಯಾಮಂಡಲ/ನಿರ್ದೇಶಕರು **CDC** ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
04. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಅವರ ಆಪ್ತ ಸಹಾಯಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
05. ಗುಲಬರ್ಗಾ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಎಲ್ಲಾ ಶಾಖೆಗಳ ಅಧೀಕ್ಷಕರುಗಳು/ವಿಷಯ ನಿರ್ವಾಹಕರುಗಳಿಗೆ.
06. ಉಗ್ರಾಣ ಪಾಲಕರು, ಉಗ್ರಾಣ ಶಾಖೆ, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
07. ನೋಡಲ್ ಅಧಿಕಾರಿಗಳು **UUCMS** ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
08. ಜಿಲ್ಲಾ ಸಮಾಜಕಲ್ಯಾಣ/ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಗೆ.
09. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ.
10. ಗಣಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರಿಗೆ ಈ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

SCAN AnyScanner